

## ಬದುಕಿನ ಏಣಿ

ಹಸುರೆಲೆಗಳ ನಡುವೆ ಚಿಗುರೆಲೆಯೊಂದು
ಹೆಜ್ಜೆ ಹೆಜ್ಜೆಗಳಿಗಿರುವ ಆಪತ್ತುಗಳ ದಾಟಿ
ಏರುತಿದೆ ಬದುಕಿನ ಏಣಿ.
ಹಿಗ್ಗಿ, ಹಗ್ಗಗಳ ಮೆಟ್ಟಿಲುಗಳ ಮೇಲಿನ ಪಾದಗಳು
ಜಾರದಿರಲಿ ಎಚ್ಚರ.
ಇನ್ನೇನು ಮುಟ್ಟಿದೆ ಎಂದಾಗಲೂ ಆವಸರಿಸಿ
ಜಾರಿದವರನೇಕ, ಏರಿದವರೂ ಅನೇಕ.
ಶಕ್ತಿ ಮೀರಿದ ಪ್ರಯತ್ನ ಇರಲಿ ನಿರಂತರ.
ಅಲ್ಲಿ ಇಲ್ಲಿಯ ನೋಟ ಬೇಡ,
ಇರಲಿ ಅರ್ಜುನನಂತೆ ಲಕ್ಷ್ಯಗುರಿಯೆಡೆಗೆ.

ತೂಗುಯ್ಯಾಲೆಯ ಜೀಕಿದವರಿಗೆ,
ಒಮ್ಮೆ ಆದಡ ಇನ್ನೊಮ್ಮೆ ಈದಡ.
ಸೋಲುಗೆಲವುಗಳಾಟಿನ ಚೌಕಟ್ಟಿನಲಿ,
ಅನುಭವ ನೆನಪಾಗಿ ಇರಲಿ ಕೊನೆತನಕ.

**ಬಿ.ಡಿ. ಕುಲಕರ್ಣಿ**

## ಭರವಸೆ

ಅಮ್ಮನೆಂಬ ಭರವಸೆ
ಬೆನ್ನ ಹಿಂದಿರೆ
ಗುಮ್ಮನೆಂಬ ಭಯವು
ದೂರ ಓಡಿರೆ

ಹಗ್ಗವಾದರೇನು ನೆಡೆವೇ
ಜಗ್ಗಲಾರೆ ನಾ
ಹಿಗ್ಗಿನಿಂದ ನಗುವೆ
ಬೆದರಲಾರೆ ನಾ

ಸೂರ್ಯನಂಥ ಬೆಳಕು
ನನ್ನ ಬಾಳಿಗೆ
ನಿನ್ನ ತೋಳ ಬಲವೇ
ನನ್ನ ಏಳಿಗೆ

ಗೆಲುವೇ ಎಂಬ ವಿಶ್ವಾಸ
ನೀ ಜೊತೆಗಿರೆ
ನಿನ್ನ ಮಮತೆ ದೃಢತೆ
ಎನ್ನೊಳಗಿರೆ

**ವಾಣಿ ಜಿತೇಂದ್ರ
ಕೋಣಂದೂರು**